**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ : ಕೇಂದ್ರ ಕಛೇರಿ : ಬೆಂಗಳೂರು**

ಸಂಖ್ಯೆ : ಕರಾಸಾ/ಕೇಕ/ನೇಮಕ/ಸಿ2/ 1260 /2012-13 ದಿನಾಂಕ 05.12.2012

**ಜಾಹೀರಾತು ಸಂಖ್ಯೆ : 3/2012**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಅವಶ್ಯಕವಿರುವ ದರ್ಜೆ-3ರ **"ಚಾಲಕ-ವ-ನಿರ್ವಾಹಕ"** ಹುದ್ದೆಗಳನ್ನು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪದವೃಂದ ಮತ್ತು ನೇಮಕಾತಿ ನಿಯಮಾವಳಿ 1982 ಮತ್ತು ತದನಂತರದ ತಿದ್ದುಪಡಿಗಳ ಅನುಸಾರ ನೇರ ನೇಮಕಾತಿಯ ಮೂಲಕ ತುಂಬಲು ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ (ON LINE) ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳ ಸಂಖ್ಯೆ ತಾತ್ಕಾಲಿಕವಾಗಿದ್ದು ನೇಮಕಾತಿ ಸಮಯದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಮಾರ್ಪಡಿಸಬಹುದಾಗಿರುತ್ತದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಯಾವುದೇ ವಿಭಾಗದಲ್ಲಿ ಕಾರ್ಯ ನಿರ್ವಹಿಸಲು ಇಚ್ಛಿಸಿದಲ್ಲಿ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

ಹುದ್ದೆಗಳ ಮೀಸಲಾತಿ ವರ್ಗೀಕರಣ ಈ ಕೆಳಕಾಣಿಸಿದಂತಿರುತ್ತದೆ.

| ಮೀಸಲಾತಿ | ಪ.ಜಾ | ಪ.ಪಂ | 1 | 2ಎ | 2ಬಿ | 3ಎ | 3ಬಿ | ಸಾ.ಅ | **ಒಟ್ಟು** |
|---|---|---|---|---|---|---|---|---|---|
| ಸಾಮಾನ್ಯ | 62 | 9 | 17 | 55 | 19 | 16 | 18 | 189 | **385** |
| ಮಹಿಳೆ | 68 | 15 | 20 | 67 | 18 | 21 | 22 | 228 | **459** |
| ಗ್ರಾಮೀಣ | 59 | 11 | 16 | 61 | 13 | 14 | 19 | 195 | **388** |
| ಮಾ.ಸೈನಿಕ | 23 | 4 | 5 | 23 | 7 | 7 | 9 | 75 | **153** |
| ಕ.ಮಾದ್ಯಮ | 8 | 5 | 1 | 12 | 1 | 1 | 3 | 39 | **70** |
| ಯೋ.ನಿರಾಶ್ರಿತ | 11 | 2 | 3 | 10 | 1 | 3 | 5 | 39 | **74** |
| ಒಟ್ಟು | **231** | **46** | **62** | **228** | **59** | **62** | **76** | **765** | **1529** |

**ಸೂಚನೆ**: **ಆಯಾ ವರ್ಗದ ಸಮತಳ ಮೀಸಲಾತಿಯ ರಿಕ್ತ ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಸಾಮಾನ್ಯ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.**

## I **ಅರ್ಹತೆಗಳು** (ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ 27.12.2012 ಕ್ಕೆ)

### 1. **ಶೈಕ್ಷಣಿಕ ವಿದ್ಯಾರ್ಹತೆ** :

ಅ. ಎಸ್ ಎಸ್ ಎಲ್ ಸಿ ಅಥವ ತತ್ಸಮಾನ ವಿದ್ಯಾರ್ಹತೆಯಲ್ಲಿ ತೇರ್ಗಡೆಯಾಗಿರಬೇಕು. (ಮುಕ್ತ ವಿಶ್ವ ವಿದ್ಯಾಲಯದಿಂದ ವಿತರಿಸಿರುವ 500 ಅಂಕಗಳ ಎಸ್‌ಎಸ್‌ಸಿ ವಿದ್ಯಾರ್ಹತೆಯ ಅಂಕಪಟ್ಟಿಯನ್ನು ಪರಿಗಣಿಸಲಾಗುವುದಿಲ್ಲ.)

ಆ. ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆ ದಿನಾಂಕಕ್ಕೆ, ಎರಡು ವರ್ಷ ಅವಧಿ ಪೂರ್ಣಗೊಂಡು, ಚಾಲ್ತಿಯಲ್ಲಿರುವ ಸರಕು ಸಾಗಾಣಿಕೆ/ಪ್ರಯಾಣಿಕರ ಭಾರಿ ವಾಹನ ಚಾಲನಾ ಪರವಾನಗಿ ಮತ್ತು ಕರ್ನಾಟಕ ಬ್ಯಾಡ್ಜ್ ಹೊಂದಿರಬೇಕು.

ಇ. ಚಾಲ್ತಿಯಲ್ಲಿರುವ ನಿರ್ವಾಹಕ ಪರವಾನಗಿ ಮತ್ತು ಕರ್ನಾಟಕ ಬ್ಯಾಡ್ಜ್ ಹೊಂದಿರಬೇಕು.

### 3. **ವಯೋಮಿತಿ** :

ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ 27.12.2012ಕ್ಕೆ,

ಅ. ಕನಿಷ್ಠ 24 ವರ್ಷಗಳು ಪೂರ್ಣಗೊಂಡಿರಬೇಕು.

ಆ. ಗರಿಷ್ಠ ವಯೋಮಿತಿ ಈ ಕೆಳಕಾಣಿಸಿದ ವಯಸ್ಸು ಮೀರಿರಬಾರದು.

| **ವರ್ಗ** | **ವಯಸ್ಸು** |
|---|---|
| **ಸಾಮಾನ್ಯ ವರ್ಗ** | 35 ವರ್ಷಗಳು |
| **2ಎ/2ಬಿ/3ಎ/3ಬಿ** | 38 ವರ್ಷಗಳು |
| **ಪ.ಜಾತಿ/ಪ.ಪಂ/ ವರ್ಗ-1** | 40 ವರ್ಷಗಳು |

ಇ. ಇಲಾಖಾ ಅಭ್ಯರ್ಥಿಗಳು ಅವರು ಸಲ್ಲಿಸಿರುವ ಸೇವಾವಧಿಯ ಗರಿಷ್ಠ 10 ವರ್ಷಗಳಿಗೆ ಮೀರದಂತೆ ವಯೋಮಿತಿ ರಿಯಾಯಿತಿಗೆ ಅರ್ಹರು ಆದರೆ ಅವರ ವಯಸ್ಸು 45 ವರ್ಷ ಮೀರಿರಬಾರದು.

ಈ. ಮಾಜಿ ಸೈನಿಕ ಅಭ್ಯರ್ಥಿಯು ಭಾರತದ ಸಶಸ್ತ್ರ ಪಡೆಯಲ್ಲಿ ಸೇವೆ ಸಲ್ಲಿಸಿ, ಮಾಜಿ ಸೈನಿಕ ಎಂಬುದಕ್ಕೆ ಅರ್ಹ ಪ್ರಮಾಣಪತ್ರವನ್ನು ಹೊಂದಿದ್ದರೆ, ಅವರು ಸಲ್ಲಿಸಿದ ಸೇವೆಯ ಜೊತೆಗೆ ಮೂರು ವರ್ಷಗಳ ವಯೋಮಿತಿಯ ರಿಯಾಯಿತಿಗೆ ಅರ್ಹರು ಆದರೆ ಅವರ ವಯಸ್ಸು 45 ವರ್ಷ ಮೀರಿರಬಾರದು.

4. **ದೇಹದಾರ್ಢ್ಯತೆ :**

ಅಭ್ಯರ್ಥಿಗಳು ಈ ಕೆಳಕಂಡ ಕನಿಷ್ಠ ದೇಹದಾರ್ಢ್ಯತೆಯನ್ನು ಕಡ್ಡಾಯವಾಗಿ ಹೊಂದಿರಬೇಕು.

| | ಪುರುಷರು | ಮಹಿಳೆಯರು |
|---|---|---|
| ಎತ್ತರ | 163 ಸೆಂ.ಮೀ | 153 ಸೆ.ಮೀ |
| ತೂಕ | 55 ಕೆ.ಜಿ | 50 ಕೆ.ಜಿ |

## II <u>ಮೀಸಲಾತಿಗಳು</u>

i. **ಜಾತಿ/ವರ್ಗ ಮೀಸಲಾತಿ** : ಈ ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳಲ್ಲಿ,

ಅ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ನಮೂನೆ–ಡಿ ರಲ್ಲಿ,

ಆ. ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳು ನಮೂನೆ–ಇ ರಲ್ಲಿ,

ಇ. ಪ್ರವರ್ಗ–2ಎ, 2ಬಿ, 3ಎ, ಮತ್ತು 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ನಮೂನೆ –ಎಫ್ ರಲ್ಲಿ ,

ಚಾಲ್ತಿಯಲ್ಲಿರುವ ಹಾಗೂ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕವಾದ 27.12.2012 ರೊಳಗಾಗಿ ಪಡೆದಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಹೊಂದಿದ್ದಲ್ಲಿ ಮಾತ್ರ ಆಯಾ ಗುಂಪಿನ ಮೀಸಲಾತಿ ಸೌಲಭ್ಯಕ್ಕೆ ಅರ್ಹರಿರುತ್ತಾರೆ (ನಮೂನೆ–ಡಿ,ಇ ಮತ್ತು ಎಫ್ ಪ್ರಮಾಣಪತ್ರಗಳ ನಮೂನೆಗಳನ್ನು ನಿಗಮದ ವೆಬ್‌ಸೈಟ್‌ನಲ್ಲಿ ಭಿತ್ತರಿಸಲಾಗಿದೆ).

**(ವಿದ್ಯಾಭ್ಯಾಸ/ಶಿಕ್ಷಣಕ್ಕಾಗಿ/ಇತರೆ ಸರ್ಕಾರಿ ಸೌಲಭ್ಯಕ್ಕಾಗಿ ಅಥವ ಸಾಲಕ್ಕಾಗಿ ಪಡೆದಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ).**

(ಸೂಚನೆ : ಪರಿವಾರ, ತಳವಾರ, ಮಾಲೇರು, ಕುರುಬ, ಬೆಸ್ತ ಜಾತಿಗೆ ಸೇರಿದ ಅಭ್ಯರ್ಥಿಗಳು ಪರಿಶಿಷ್ಠ ಪಂಗಡದ ನಾಯಕ, ಮಾಲೇರು, ಕಾಡುಕುರುಬ, ಜೇನುಕುರುಬ, ಗೊಂಡ, ರಾಜ್‌ಗೊಂಡ, ಕೋಳಿದೋರ ಮತ್ತು ಟೋಕ್ರಿ ಕೋಳಿ ಎಂದು ಜಾತಿ ಪ್ರಮಾಣ ಪತ್ರ ಪಡೆದಿದ್ದಲ್ಲಿ ಅವುಗಳು ಅಸಿಂದುವಾಗುತ್ತವೆ. ಆದುದರಿಂದ ಪರಿಶಿಷ್ಠ ಪಂಗಡದ ನಾಯಕ, ಮಾಲೇರು, ಕಾಡುಕುರುಬ, ಜೇನುಕುರುಬ, ಗೊಂಡ, ರಾಜ್‌ಗೊಂಡ, ಕೋಳಿದೋರ ಮತ್ತು ಟೋಕ್ರಿ ಕೋಳಿ ಜಾತಿಗೆ ಸೇರಿದ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ ; ಎಸ್‌ಡಬ್ಲ್ಯೂ/713 /ಎಸ್‌ಎಡಿ/93 ದಿನಾಂಕ 11/03/2002 ರನ್ವಯ ದಿನಾಂಕ 11/03/2002 ರ ನಂತರ ಹಾಗೂ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದ ಜಾತಿ ಪ್ರಮಾಣ ಪತ್ರವನ್ನು ಹೊಂದಿರಬೇಕು).

ii. **ಗ್ರಾಮೀಣ ಮೀಸಲಾತಿ**

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ : 08 : ಸೆನೆನಿ : 2001 ದಿನಾಂಕ 13/02/2001 ರಂತೆ ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳನ್ವಯ 1ನೇ ತರಗತಿಯಿಂದ 10ನೇ ತರಗತಿಯವರಗೆ ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು.

ಅ. ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, 2ಎ, 2ಬಿ, 3ಎ ಹಾಗೂ 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಪ್ರಮಾಣ ಪತ್ರವನ್ನು ನಮೂನೆ–2 ರಲ್ಲಿ ಸಂಬಂದಪಟ್ಟ ಶಾಲಾ ಮುಖ್ಯೋಪಾಧ್ಯಾಯರಿಂದ ಸಹಿ ಮತ್ತು ಮೊಹರಿನೊಂದಿಗೆ ಪಡೆದ ಪ್ರಮಾಣ ಪತ್ರದ ಮೇಲೆ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಯ ಮೇಲು ಸಹಿ ಮಾಡಿಸಿದ್ದಲ್ಲಿ ಮಾತ್ರ ಗ್ರಾಮೀಣ ಮೀಸಲಾತಿಗೆ ಅರ್ಹರಾಗುವರು.

ಆ. ಗ್ರಾಮೀಣ ಮೀಸಲಾತಿ ಕೋರ ಬಯಸುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಮೇಲೆ ತಿಳಿಸಿದಂತೆ ನಮೂನೆ–2 ರ ಜೊತೆಗೆ ಅವರು ಮೇಲುಸ್ತರಕ್ಕೆ ಸೇರಿಲ್ಲದ ಬಗ್ಗೆ ನಮೂನೆ–1 ರಲ್ಲಿ ಸಂಬಂದಪಟ್ಟ ತಹಸೀಲ್ದಾರರಿಂದ ಪಡೆದ ಪ್ರಮಾಣ ಪತ್ರವನ್ನು ಹೊಂದಿರಬೇಕು. **(ಇತರೆ ನಮೂನೆಗಳಲ್ಲಿ ಸ್ವೀಕರಿಸಲ್ಪಡುವ ಮೀಸಲಾತಿ ಪ್ರಮಾಣಪತ್ರಗಳನ್ನು ತಿರಸ್ಕರಿಸಲಾಗುವುದು ಹಾಗೂ ಅಂತಹವರು ಗ್ರಾಮೀಣ ಮೀಸಲಾತಿಗೆ ಅನರ್ಹರಾಗುತ್ತಾರೆ. ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಸಂಸ್ಥೆಯ ವೆಬ್ ಸೈಟ್‌ನಲ್ಲಿ ಭಿತ್ತರಿಸಲಾಗಿದೆ).**

iii. **ಕನ್ನಡ ಮಾಧ್ಯಮ** :

ಅಭ್ಯರ್ಥಿಯು 1ನೇ ತರಗತಿಯಿಂದ 10ನೇ ತರಗತಿಯವರಗೆ ಎಲ್ಲಾ ತರಗತಿಗಳನ್ನು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ, ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಆಸುಇ/71/ಸೆನೆನಿ/2001 ದಿನಾಂಕ 24–10–2002 ರನ್ವಯ ನಿಗಧಿತ ನಮೂನೆಯಲ್ಲಿ ಸಂಬಂದಪಟ್ಟ ಶಾಲಾ ಮುಖ್ಯೋಪಾಧ್ಯಾಯರಿಂದ ಸಹಿ ಹಾಗು ಮೊಹರಿನೊಂದಿಗೆ ಪಡೆದ ಪ್ರಮಾಣ ಪತ್ರ ಹೊಂದಿದ್ದಲ್ಲಿ

ಮಾತ್ರ ಕನ್ನಡ ಮಾಧ್ಯಮ ಮೀಸಲಾತಿಗೆ ಅರ್ಹರಾಗುತ್ತಾರೆ. (ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಸಂಸ್ಥೆಯ ವೆಬ್ ಸೈಟ್‌ನಲ್ಲಿ ಭಿತ್ತರಿಸಲಾಗಿದೆ).

iv. **ಯೋಜನಾ ನಿರಾಶ್ರಿತರು :**

ಸರ್ಕಾರದ ಆದೇಶ ಸಂಖ್ಯೆ :ಸಿಆಸುಇ/23/ಸೆನೆನಿ/99, ದಿನಾಂಕ 23/11/2000 ರಲ್ಲಿ ಸೂಚಿಸಿರುವಂತೆ ಯೋಜನಾ ನಿರಾಶ್ರಿತರ ಮೀಸಲಾತಿಗೆ ಅರ್ಹ ಅಭ್ಯರ್ಥಿಗಳು ನಿಗಧಿತ ನಮೂನೆಯಲ್ಲಿ ಅಧಿಕೃತ ಪ್ರಾಧಿಕಾರಿಗಳಿಂದ ಪಡೆದ ಸಮರ್ಪಕ ಪ್ರಮಾಣ ಪತ್ರ ಹೊಂದಿರಬೇಕು. ಈ ಪ್ರಮಾಣಪತ್ರದಲ್ಲಿ ಸಂಬಂದಪಟ್ಟಣೆಲ್ಲಾ ಐಟಂ/ಕಲಂಗಳನ್ನು ಭರ್ತಿ ಮಾಡಿದ ಪಕ್ಷದಲ್ಲಿ ಮಾತ್ರ ಯೋಜನಾ ನಿರಾಶ್ರಿತರ ಮೀಸಲಾತಿಗೆ ಅರ್ಹರಿರುತ್ತಾರೆ. (ಈ ಪ್ರಮಾಣ ಪತ್ರದ ನಮೂನೆಗಳನ್ನು ಸಂಸ್ಥೆಯ ವೆಬ್ ಸೈಟ್‌ನಲ್ಲಿ ಭಿತ್ತರಿಸಲಾಗಿದೆ).

v. **ಮಾಜಿ ಸೈನಿಕ :**

ಮಾಜಿ ಸೈನಿಕ ಅಭ್ಯರ್ಥಿಯು ಭಾರತದ ಸಶಸ್ತ್ರ ಪಡೆಯಲ್ಲಿ ಸೇವೆ ಸಲ್ಲಿಸಿರುವ ಬಗ್ಗೆ ಅಧಿಕೃತ ಡಿಸ್ ಚಾರ್ಜ್ ಪುಸ್ತಕವನ್ನು ಅಥವ ಮಾಜಿ ಸೈನಿಕ ಎಂಬುದರ ಬಗ್ಗೆ ಸಂಬಂದಪಟ್ಟ ಅಧಿಕಾರಿಗಳಿಂದ ವಿತರಿಸಲ್ಪಟ್ಟಿರುವ ಅಧಿಕೃತ ದಾಖಲೆಗಳನ್ನು ಹೊಂದಿರಬೇಕು.

## III ನಿಗಧಿತ ಶುಲ್ಕ

**ಅ. ಶುಲ್ಕದ ವಿವರ**

| ವರ್ಗ | ಶುಲ್ಕ |
|---|---|
| ಸಾಮಾನ್ಯ ವರ್ಗ, 2ಎ, 2ಬಿ, 3ಎ ಮತ್ತು 3ಬಿ | ರೂ.300/- |
| ಪ.ಜಾತಿ, ಪ.ಪಂಗಡ, ವರ್ಗ-1, ಮಾಜಿ ಸೈನಿಕ ಮತ್ತು ಅಶಕ್ತ ಮಾಜಿ ಸೈನಿಕರ ಅವಲಂಬಿತರಿಗೆ | ರೂ.150/- |

**ಆ. ಶುಲ್ಕ ಪಾವತಿ ಮಾಡುವ ರೀತಿ ಹಾಗೂ ಬ್ಯಾಂಕಿನ ವಿವರ :**

www.ksrtcjobs.com ನಲ್ಲಿ ದೊರೆಯುವ ನಿಗಧಿತ ಬ್ಯಾಂಕ್ ಚಲನ್ನು ON LINE ಮೂಲಕ ಮುದ್ರಿಸಿಕೊಂಡು ಅರ್ಜಿ ಶುಲ್ಕವನ್ನು ಕರ್ನಾಟಕ ರಾಜ್ಯದ ಯಾವುದಾದರೂ "ಸ್ಟೇಟ್ ಬ್ಯಾಂಕ್ ಆಫ್ ಮೈಸೂರು" (State Bank of Mysore) ಶಾಖೆಯಲ್ಲಿ ಮಾತ್ರ **"ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು, ಕರಾರಸಾ ನಿಗಮ, (CAO-FA, KSRTC) ಬೆಂಗಳೂರು"** ರವರ ಖಾತೆಗೆ ಪಾವತಿಸಬೇಕು. ಪಾವತಿ ಮಾಡಿದ ನಂತರ ಬ್ಯಾಂಕಿನಿಂದ ನೀಡುವ Sl.No/Journal No ನ್ನು ON LINE ಅರ್ಜಿಯಲ್ಲಿ ತಪ್ಪದೇ ನಮೂದಿಸತಕ್ಕದ್ದು.

ಇ. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂತಿರುಗಿಸಲಾಗುವುದಿಲ್ಲ ಅಥವ ಅದನ್ನು ಸಂಸ್ಥೆಯು ನಡೆಸುವ ಇತರೆ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. ಶುಲ್ಕವನ್ನು ಸಂದಾಯ ಮಾಡದಿದ್ದಲ್ಲಿ ಅವರ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

## IV ಅರ್ಜಿಯನ್ನು ಸಲ್ಲಿಸುವ ವಿಧಾನ ಮತ್ತು ಕೊನೆಯ ದಿನಾಂಕ

ಅ. ಅರ್ಜಿಯನ್ನು ಕಡ್ಡಾಯವಾಗಿ ಆನ್ ಲೈನ್ ಮುಖಾಂತರವೇ ಕ ರಾ ರ ಸಾ ನಿಗಮದ ವೆಬ್ ಸೈಟ್ www.ksrtcjobs.com ಮೂಲಕ ಸಲ್ಲಿಸಬೇಕು.

ಆ. ದಿನಾಂಕ 10.12.2012 ರಿಂದ 27.12.2012 ರವರಗೆ ವೆಬ್ ಸೈಟ್ ತೆರೆದಿರುತ್ತದೆ. ಅರ್ಜಿಗಳನ್ನು ಕೊನೆಯ ದಿನಾಂಕವಾದ 27.12.2012 ರ ಸಂಜೆ 17:30 ಗಂಟೆಯೊಳಗೆ ಆನ್ ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ.

ಇ. ಮೇಲ್ಕಂಡ ನಿಗದಿತ / ಕೊನೆಯ ದಿನಾಂಕ ಮತ್ತು ಸಮಯದ ನಂತರ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಈ ಅಭ್ಯರ್ಥಿಗಳು ಕೇವಲ ಒಂದು ಅರ್ಜಿಯನ್ನು ಮಾತ್ರ ಸಲ್ಲಿಸಬಹುದಾಗಿದ್ದು ಒಮ್ಮೆ ಸಲ್ಲಿಸಿದ ಅರ್ಜಿಯನ್ನು ಯಾವುದೇ ಕಾರಣದಿಂದಲೂ ತಿದ್ದುಪಡಿ ಮಾಡಲು ಅವಕಾಶ ಇರುವುದಿಲ್ಲ. ಆದ್ದರಿಂದ ಅಭ್ಯರ್ಥಿಗಳು ಸೂಚನೆಗಳನ್ನು ಓದಿ, ಅರ್ಥ ಮಾಡಿಕೊಂಡ ನಂತರ ಅರ್ಜಿಯನ್ನು ತುಂಬಿ ಸಲ್ಲಿಸತಕ್ಕದ್ದು.

ಉ. ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ ತಕ್ಷಣ, ಅರ್ಜಿಯಲ್ಲಿ ನಮೂದಿಸಿದ ವಿವರಗಳ ಆಧಾರದ ಮೇಲೆ ನೀಡುವ ನೋಂದಣಿ ಸಂಖ್ಯೆಯು, ಅರ್ಜಿಯ ಪ್ರತಿಯನ್ನು ಡೌನ್ ಲೋಡ್ ಮಾಡಿ ಅದನ್ನು ಮುದ್ರಿಸಿಕೊಂಡು ಅದರಲ್ಲಿ ತಮ್ಮ ಇತ್ತೀಚಿನ ಭಾವಚಿತ್ರವನ್ನು ಅಂಟಿಸಿ ತಮ್ಮೊಂದಿಗೆ ಇಟ್ಟುಕೊಳ್ಳುವುದು ಹಾಗೂ ಪರಿಶೀಲನಾ ಸಮಯದಲ್ಲಿ ಇವುಗಳನ್ನು ಹಾಜರುಪಡಿಸುವುದು.

## V ಆಯ್ಕೆ ವಿಧಾನ

ದೈಹಿಕ ಅರ್ಹತೆ ಮತ್ತು ಮೂಲ ದಾಖಲಾತಿಗಳ ಪರಿಶೀಲನೆಗೆ ಹಾಜರಾದ ಅಭ್ಯರ್ಥಿಗಳ ಪೈಕಿ ಹುದ್ದೆಗೆ ನಿಗದಿಪಡಿಸಲಾದ ಎಲ್ಲಾ ಅರ್ಹತೆಗಳನ್ನು ಹೊಂದಿರುವ ಅರ್ಹ ಅಭ್ಯರ್ಥಿಗಳಿಗೆ ಸಂಸ್ಥೆಯ ವತಿಯಿಂದ ಒಟ್ಟು 50 ಅಂಕಗಳಿಗೆ, ತಲಾ 25 ಅಂಕಗಳಂತೆ ಎರಡು ಸಲ ಚಾಲನಾ ಸಾಮರ್ಥ್ಯ ವೃತ್ತಿ ಪರೀಕ್ಷೆಯನ್ನು ಗಣಕೀಕೃತ ಟ್ರ್ಯಾಕ್‌ನಲ್ಲಿ ನಡೆಸಲಾಗುವುದು. ಸದರಿ ಪರೀಕ್ಷೆಯಲ್ಲಿ ನಿಗದಿಪಡಿಸಿರುವ ಒಟ್ಟು 50 ಅಂಕಗಳಿಗೆ ಕನಿಷ್ಟ 25 ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಮಾತ್ರ ಉತ್ತೀರ್ಣರೆಂದು ತೀರ್ಮಾನಿಸಿ ಆಯ್ಕೆಗೆ ಪರಿಗಣಿಸಲಾಗುವುದು. ನಂತರ ಚಾಲನಾ ವೃತ್ತಿ ಪರೀಕ್ಷೆಯಲ್ಲಿ ಪಡೆದ ಅಂಕಗಳ ಹಾಗೂ ಜಾರಿಯಲ್ಲಿರುವ ಮೀಸಲಾತಿ ನಿಯಮಗಳನುಸಾರ ಅರ್ಹತೆಯ ಮೇರೆಗೆ ಆಯ್ಕೆ ಮಾಡಲಾಗುವುದು.

ಅಭ್ಯರ್ಥಿಗಳು ಆನ್ ಲೈನ್ ಮೂಲಕ ಸಲ್ಲಿಸಿದ ಅರ್ಜಿಯಲ್ಲಿ ನಮೂದಿಸಿದ ವಿವರಗಳ ಆಧಾರದ ಮೇಲೆ ದೈಹಿಕ ಮತ್ತು ಮೂಲದಾಖಲಾತಿಗಳ ಪರಿಶೀಲನೆ/ಚಾಲನಾ ವೃತ್ತಿ ಪರೀಕ್ಷೆಗೆ ಹಾಜರಾಗಲು ಕರೆಪತ್ರವನ್ನು ಸಂಸ್ಥೆಯ ವೆಬ್‌ಸೈಟ್ ಹಾಗೂ ದಿನಪತ್ರಿಕೆಗಳಲ್ಲಿ ಮುಂದೆ ತಿಳಿಸಲಾಗುವ ದಿನಾಂಕಗಳಲ್ಲಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ ತಕ್ಷಣ ನೀಡುವ ನೋಂದಣಿ ಸಂಖ್ಯೆಯನ್ನು ನಮೂದಿಸಿ ವೆಬ್‌ಸೈಟ್‌ನಿಂದ ಮುದ್ರಿಸಿಕೊಳ್ಳಬಹುದಾಗಿರುತ್ತದೆ. ಈ ಕರೆಪತ್ರದಲ್ಲಿ, ಅಭ್ಯರ್ಥಿಗಳು ಮೌಖಿಕ ಪರಿಶೀಲನೆ/ಚಾಲನಾವೃತ್ತಿ ಪರೀಕ್ಷೆಗೆ ಹಾಜರಾಗಬೇಕಾದ ದಿನಾಂಕ, ಸ್ಥಳ ಹಾಗೂ ಯಾವ ದಾಖಲಾತಿಗಳನ್ನು ಪರಿಶೀಲನೆಗೆ ಸಲ್ಲಿಸಬೇಕೆಂಬ ಮಾಹಿತಿಯು ಲಭ್ಯವಿದ್ದು, ಅಭ್ಯರ್ಥಿಗಳು ನಿಗಮದ ವೆಬ್‌ಸೈಟ್‌ನಲ್ಲಿ ನೇಮಕಾತಿಗೆ ಸಂಬಂಧಿಸಿದಂತೆ ಆಗಾಗ ನೀಡುವ ಸೂಚನೆಗಳನ್ನು ಗಮನಿಸತಕ್ಕದ್ದು.

## VI ತರಬೇತಿ ಅವದಿ, ಭತ್ಯೆ ಹಾಗೂ ವೇತನ ಶ್ರೇಣಿ

ಅ. ಅರ್ಹ ಅಭ್ಯರ್ಥಿಗಳು ಮೇಲ್ಕಾಣಿಸಿದ ಹುದ್ದೆಗೆ ಆಯ್ಕೆಗೊಂಡಲ್ಲಿ, ಎರಡು ವರ್ಷಗಳ ಕಾಲ ಪಠ್ಯ/ವೃತ್ತಿ ತರಬೇತಿಗೆ ನಿಯೋಜಿಸಲಾಗುವುದು. ತರಬೇತಿ ಅವಧಿಯಲ್ಲಿ, ಚಾಲಕರಾಗಿ ಕರ್ತವ್ಯ ನಿರ್ವಹಿಸಿದಲ್ಲಿ ಮಾಸಿಕ ರೂ.6500/- ದರದಲ್ಲಿ, ಚಾಲಕ-ವ-ನಿರ್ವಾಹಕ ಮತ್ತು ನಿರ್ವಾಹಕರಾಗಿ ಕರ್ತವ್ಯ ನಿರ್ವಹಿಸಿದಲ್ಲಿ ಮಾಸಿಕ ರೂ.6000/- ದರದಲ್ಲಿ ತರಬೇತಿ ಭತ್ಯೆಯನ್ನು ನೀಡಲಾಗುವುದು. ಒಂದು ವೇಳೆ ಎರಡೂ ಹುದ್ದೆಗಳನ್ನು ಒಟ್ಟಿಗೆ ಅಂದರೆ ಚಾಲಕ-ವ-ನಿರ್ವಾಹಕರಾಗಿ ಕರ್ತವ್ಯ ನಿರ್ವಹಿಸಿದಲ್ಲಿ ಪ್ರಚಲಿತ ನಿಯಮಾವಳಿಗಳ ಪ್ರಕಾರ ವಿಶೇಷ ಭತ್ಯೆಗೆ ಅರ್ಹರಿರುತ್ತಾರೆ.

ಆ. ಬೆಂಗಳೂರು ಹಾಗೂ ಮಂಗಳೂರು ಕೇಂದ್ರ ಸ್ಥಾನಗಳಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗೆ, ಮೇಲ್ಕಾಣಿಸಿದ ಮಾಸಿಕ ತರಬೇತಿ ಭತ್ಯೆಯ ಜೊತೆಗೆ ತಿಂಗಳಲ್ಲಿ ಕನಿಷ್ಟ 20 ದಿನಗಳು ವಾಸ್ತವಿಕ ಹಾಜರಾತಿ ಇದ್ದಲ್ಲಿ ಮಾಸಿಕ ರೂ.500/- ಗಳನ್ನು ಪರಿಶ್ರಮ ಭತ್ಯೆಯನ್ನಾಗಿ ನೀಡಲಾಗುವುದು.

ಇ. ಹುದ್ದೆಗೆ ನಿಗದಿಪಡಿಸಿರುವ ಇತರೆ ಭತ್ಯೆಗಳು.

ಈ. ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷಗಳ ಕರ್ತವ್ಯದ ಮೇಲೆ ತರಬೇತಿ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದಲ್ಲಿ, ಖಾಯಂ ಪೂರ್ವ ಪರೀಕ್ಷಾರ್ಥ ಸೇವೆಯಲ್ಲಿ ನೇಮಕಗೊಳಿಸಿ 6230-90-6410-130-7190-170-8040-220-8480-280-9320-340-10000 ರಂತೆ ಕಾಲಿಕ ವೇತನ ಶ್ರೇಣಿಯನ್ನು ನಿಗದಿಪಡಿಸಲಾಗುವುದು.

## VII ದಾಖಲಾತಿಗಳ ವಿವರ

ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿರುವ ಅರ್ಹತೆ ಹಾಗೂ ಮೀಸಲಾತಿಗಳಿಗೆ ಅನುಗುಣವಾಗಿ ಈ ಕೆಳಕಂಡ ಮೂಲ ದಾಖಲಾತಿಗಳ ಪ್ರಮಾಣಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಲಾಗಿರುವ ಕೊನೆಯ ದಿನಾಂಕವಾದ 27.12.2012ರೊಳಗೆ ಹೊಂದಿರಬೇಕು ಹಾಗೂ ಸಂಸ್ಥೆಯು ಅವುಗಳನ್ನು ಹಾಜರುಪಡಿಸಲು ಸೂಚಿಸಿದಾಗ ತಪ್ಪದೆ ಹಾಜರು ಪಡಿಸತಕ್ಕದ್ದು.

1. ಅರ್ಜಿ ಶುಲ್ಕ ಪಾವತಿ ಮಾಡಿರುವ ಬಗ್ಗೆ ಬ್ಯಾಂಕ್‌ನಿಂದ ನೀಡುವ ಚಲನ್‌ನ ಮೂಲ ಪ್ರತಿ.
2. ಎಸ್ ಎಸ್ ಎಲ್ ಸಿ ಅಥವ ತತ್ಸಮಾನ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾಗಿರುವ ಬಗ್ಗೆ ಅಂಕಪಟ್ಟಿ.
3. ಜನ್ಮ ದಿನಾಂಕದ ದಾಖಲೆಗಾಗಿ ಜನ್ಮ ದಿನಾಂಕವುಳ್ಳ ಎಸ್ ಎಸ್ ಎಲ್ ಸಿ ಅಂಕಪಟ್ಟಿ /ಶಾಲಾ ವರ್ಗಾವಣಾ ಪತ್ರ.
4. ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕಕ್ಕೆ **"ಎರಡು ವರ್ಷ ಅವಧಿ ಪೂರ್ಣಗೊಂಡು"**, ಚಾಲ್ತಿಯಲ್ಲಿರುವ ಸರಕು ಸಾಗಾಣಿಕೆ/ಪ್ರಯಾಣಿಕರ ಭಾರಿ ವಾಹನ ಚಾಲನಾ ಪರವಾನಗಿ ಹೊಂದಿರಬೇಕು. ಜೊತೆಗೆ ಕರ್ನಾಟಕ ಬ್ಯಾಡ್ಜ್ ಹೊಂದಿರಬೇಕು.
5. ಚಾಲ್ತಿಯಲ್ಲಿರುವ ನಿರ್ವಾಹಕ ಪರವಾನಗಿ ಮತ್ತು ಕರ್ನಾಟಕ ಬ್ಯಾಡ್ಜ್ ಹೊಂದಿರಬೇಕು.
6. ಸೈನಿಕ ಸೇವೆಯಿಂದ ಬಿಡುಗಡೆಯಾಗಿ / ಮುಕ್ತಿ ಹೊಂದಿ ಮಾಜಿ ಸೈನಿಕ ಎಂಬುದಾಗಿ ನಿರ್ಧರಿಸಿರುವ ಬಗ್ಗೆ ಪ್ರಮಾಣಪತ್ರ.(ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ).

7. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, 2ಎ, 2ಬಿ, 3ಎ, ಹಾಗೂ 3ಬಿ ವರ್ಗಗಳ ಮೀಸಲಾತಿಯ ಚಾಲ್ತಿಯಲ್ಲಿರುವ ಪ್ರಮಾಣ ಪತ್ರಗಳು.(ಜಾತಿ/ವರ್ಗಗಳ ಮೀಸಲಾತಿ ಕೋರಿದ್ದಲ್ಲಿ).
8. ನಮೂನೆ–1 ಮತ್ತು ನಮೂನೆ–2 ರಲ್ಲಿ ಪಡೆದ ಗ್ರಾಮೀಣ ಅಭ್ಯರ್ಥಿ ಮೀಸಲಾತಿ ಪ್ರಮಾಣ ಪತ್ರ ಪ್ರತಿಗಳು(ಗ್ರಾಮೀಣ ಮೀಸಲಾತಿ ಕೋರಿದ್ದಲ್ಲಿ).
9. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಪ್ರಮಾಣ ಪತ್ರ. ( ಕನ್ನಡ ಮಾಧ್ಯಮ ಮೀಸಲಾತಿ ಕೋರಿದ್ದಲ್ಲಿ).
10. ಇಲಾಖಾ ಅಭ್ಯರ್ಥಿಗಳು ಸಂಬಂದಪಟ್ಟ ನೇಮಕ ಪ್ರಾಧಿಕಾರಸ್ಥರಿಂದ ಪಡೆದ ಸೇವಾ ಪ್ರಮಾಣ ಪತ್ರ. (ಇಲಾಖಾ ಅಭ್ಯರ್ಥಿಯಾಗಿದ್ದಲ್ಲಿ).

## VIII ಸೂಚನೆಗಳು

1. ಒಬ್ಬ ಅಭ್ಯರ್ಥಿಯು ಒಂದು ಅರ್ಜಿಯನ್ನು ಮಾತ್ರ ಸಲ್ಲಿಸಲು ಅವಕಾಶವಿರುತ್ತದೆ. ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಮೊದಲು ಸಲ್ಲಿಸಿರುವ ಅರ್ಜಿ ಹಾಗೂ ಅದರಲ್ಲಿ ನಮೂದಿಸಿರುವ ವಿವರಗಳನ್ನು ಮಾತ್ರ ಪರಿಗಣಿಸಿ ಒಂದು ಬಾರಿ ಮಾತ್ರ ಚಾಲನಾ ವೃತ್ತಿ ಪರೀಕ್ಷೆಯನ್ನು ನೀಡಲಾಗುವುದು.
2. ಆಯ್ಕೆಗೊಂಡ ಅಭ್ಯರ್ಥಿಗಳು ಚಾಲಕ ಅಥವ ನಿರ್ವಾಹಕ ಅಥವ ಚಾಲಕ–ವ–ನಿರ್ವಾಹಕ ಈ ಮೂರು ಹುದ್ದೆಗಳಲ್ಲಿ ಸಂಸ್ಥೆಯ ಅವಶ್ಯಕತೆಗೆ ಅನುಗುಣವಾಗಿ ಕರ್ತವ್ಯ ನಿರ್ವಹಿಸಬೇಕಾಗುತ್ತದೆ.
3. ನೈತಿಕ ದುರ್ನಡತೆಯಿಂದಾಗಿ/ನೀತಿಬಾಹಿರ ಚಟುವಟಿಕೆಗಳಿಂದಾಗಿ ನ್ಯಾಯಾಲಯದಿಂದ ಶಿಕ್ಷೆಗೊಳಪಟ್ಟಿರುವ ವ್ಯಕ್ತಿ ಅಥವ ಈ ಸಂಸ್ಥೆಯಲ್ಲಿ ಅಥವ ರಾಜ್ಯ/ಕೇಂದ್ರ/ಸ್ಥಳೀಯ ಸಂಸ್ಥೆ/ಕೈಗಾರಿಕಾ/ವಾಣಿಜ್ಯಕ್ಕೆ ಸಂಬಂದಪಟ್ಟ ಅಥವ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಅಧೀನದಲ್ಲಿರುವ ಕಛೇರಿಗಳಲ್ಲಿ ನೈತಿಕ ದುರ್ನಡತೆಯಿಂದಾಗಿ / ನೀತಿಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾದ ಕಾರಣಕ್ಕಾಗಿ ಅಥವ ಆಯ್ಕೆಯಾದ ಅಭ್ಯರ್ಥಿಯು ಬದಲಿಯಾಗಿ / ತರಬೇತಿದಾರರಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಾನೂನು ಬಾಹಿರ/ನೀತಿ ಬಾಹಿರ ಚಟುವಟಿಕೆಗಳಲ್ಲಿ ತೊಡಗಿ ಸೇವೆಯಿಂದ ತೆಗೆದು ಹಾಕಿದ್ದಲ್ಲಿ/ವಜಾ ಮಾಡಿದ್ದಲ್ಲಿ ನೇಮಕಾತಿಗೆ ಅನರ್ಹರಾಗುತ್ತಾರೆ.
4. ಅರ್ಜಿಯಲ್ಲಿ ಸುಳ್ಳು ಮಾಹಿತಿ ನೀಡಿ ಅಥವ ನಕಲಿ ಪ್ರಮಾಣಪತ್ರ/ದಾಖಲಾತಿಗಳನ್ನು ಸಲ್ಲಿಸಿ ನೌಕರಿ ಪಡೆದಿರುವುದು, ಯಾವುದೇ ಸಂದರ್ಭದಲ್ಲಿ ಕಂಡು ಬಂದಲ್ಲಿ ಅವರನ್ನು ಯಾವುದೇ ಮುನ್ಸೂಚನೆ ನೀಡದೆ ಯಾವುದೇ ಸಮಯದಲ್ಲಾದರೂ ನೌಕರಿಯಿಂದ ವಜಾ ಮಾಡಲಾಗುವುದು ಜೊತೆಗೆ ಅವರ ವಿರುದ್ದ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು.
5. ಅಭ್ಯರ್ಥಿಯು ಅರ್ಜಿಯಲ್ಲಿ ನೀಡುವ ವಿಳಾಸವೇ ಅಂತಿಮವಾಗಿದ್ದು, ಎಲ್ಲಾ ಪತ್ರವ್ಯವಹಾರಗಳನ್ನು ಅದೇ ವಿಳಾಸಕ್ಕೆ ಕಳುಹಿಸಿಕೊಡಲಾಗುವುದು. ನಂತರದಲ್ಲಿ ವಿಳಾಸ ಬದಲಾವಣೆ ಬಗ್ಗೆ ಯಾವುದೇ ಪತ್ರ ವ್ಯವಹಾರವನ್ನು ಪರಿಗಣಿಸಲಾಗುವುದಿಲ್ಲ.
6. ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯ ಪರೀಕ್ಷೆಗೆ ಹಾಜರಾಗಿ, ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಫಲಿತಾಂಶ ಪ್ರಕಟವಾಗದ ಪಕ್ಷದಲ್ಲಿ ಅಂತಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಂತಿಲ್ಲ.
7. ಅರ್ಹ ಅಭ್ಯರ್ಥಿಗಳು ಆನ್ ಲೈನ್‌ನಲ್ಲಿ ಅರ್ಜಿಯನ್ನು ಭರ್ತಿ ಮಾಡುವ ಮೊದಲು ವೆಬ್ ಸೈಟ್‌ನಲ್ಲಿ ನೀಡಿರುವ ಸೂಚನೆಗಳನ್ನು/ವಿಧಾನವನ್ನು ತಿಳಿದುಕೊಳ್ಳುವುದು.
8. ಅಭ್ಯರ್ಥಿಗಳ ಅರ್ಹತೆಯ ವಿಷಯದಲ್ಲಿ ಕ ರಾ ರ ಸಾ ನಿಗಮದ ನಿರ್ಧಾರವೇ ಅಂತಿಮವಾಗಿರುತ್ತದೆ.
9. ಆಯ್ಕೆಗೊಂಡು ಸೇವೆಯಲ್ಲಿ ಖಾಯಂಗೊಳ್ಳುವ ಅಭ್ಯರ್ಥಿಗಳು ಉಪದಾನ ಪಾವತಿ ಕಾಯ್ದೆ 1972 ರನ್ವಯ ಉಪಧನ ಪಡೆಯಲು ಅರ್ಹರಿರುತ್ತಾರೆ.
10. ಎಸ್ ಎಸ್ ಎಲ್ ಸಿ ಅಥವ ತತ್ಸಮಾನ ಅಥವ ಮೇಲ್ದರ್ಜೆ ವಿದ್ಯಾರ್ಹತೆಯಲ್ಲಿ ಕನ್ನಡ ವಿಷಯುವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಅಧ್ಯಯನ ಮಾಡದೆ ಇದ್ದಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳು ನಿಗಮದ ವತಿಯಿಂದ ನಡೆಸಲಾಗುವ ಕನ್ನಡ ಭಾಷಾ ಜ್ಞಾನ ಪರೀಕ್ಷೆಯಲ್ಲಿ ಒಂದೇ ಅವಕಾಶದಲ್ಲಿ ಉತ್ತೀರ್ಣರಾಗಬೇಕು ಇಲ್ಲದಿದ್ದಲ್ಲಿ ಅವರ ಆಯ್ಕೆಯನ್ನು ರದ್ದುಗೊಳಿಸಲಾಗುವುದು.
11. ಆಯ್ಕೆ ಹೊಂದಿದ ಅಭ್ಯರ್ಥಿಯು ಸಾರ್ವಜನಿಕ ಉದ್ದಿಮೆ ಅಥವ ಕರ್ನಾಟಕ ಸರ್ಕಾರ ಅಥವ ಕೇಂದ್ರ ಸರ್ಕಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದಲ್ಲಿ ಅಂತಹ ಅಭ್ಯರ್ಥಿಯು ಸೂಕ್ತ ಪ್ರಾಧಿಕಾರಸ್ಥರಿಂದ ಆಕ್ಷೇಪಣೆ ಇಲ್ಲವೆಂಬ ಪತ್ರವನ್ನು ಹುದ್ದೆಗೆ ವರದಿ ಮಾಡಿಕೊಳ್ಳುವಾಗ ಹಾಜರುಪಡಿಸತಕ್ಕದ್ದು.
12. ಆಯ್ಕೆಗೆ ಸಂಬಂದಿಸಿದಂತೆ ಅಭ್ಯರ್ಥಿಯು ಯಾವುದೇ ವಿಧವಾದ ಪ್ರಚಾರ ಮಾಡುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಲ್ಲಿ ಯಾವ ಮುನ್ಸೂಚನೆ ನೀಡದೆ ಅವರನ್ನು ಆಯ್ಕೆಗೆ ಅನರ್ಹಗೊಳಿಸಲಾಗುವುದು.

13. ಚಾಲನಾ ವೃತ್ತಿ ಪರೀಕ್ಷೆ ನಡೆಸುವ ವಿಧಾನ, ವಿವರಗಳನ್ನು ನಿಗಮದ ವೆಬ್ ಸೈಟ್ www.ksrtcjobs.com ನಲ್ಲಿ ಪಡೆಯಬಹುದಾಗಿರುತ್ತದೆ.
14. ನೇಮಕಾತಿ ಪ್ರಕ್ರಿಯೆಗಳ ಬಗ್ಗೆ ಅಭ್ಯರ್ಥಿಗಳಿಂದ ಯಾವುದೇ ರೀತಿಯ ಪತ್ರ ವ್ಯವಹಾರ ಅಥವ ವಿಚಾರಣೆಗಳಿಗೆ ಆಸ್ಪದವಿರುವುದಿಲ್ಲ. ನೇಮಕಾತಿಯ ವಿವಿಧ ಹಂತಗಳಿಗೆ ಸಂಬಂದಿಸಿದ ಎಲ್ಲಾ ವಿವರಗಳನ್ನು ಸಂಸ್ಥೆಯ ವೆಬ್ ಸೈಟ್ www.ksrtcjobs.com ನಲ್ಲಿ ಲಭ್ಯವಿರುತ್ತದೆ.
15. ಆಯ್ಕೆಗೊಂಡ ಅಭ್ಯರ್ಥಿಗಳನ್ನು ಕ ರಾ ರ ಸಾ ನಿಗಮದ ಈ ಕೆಳಕಾಣಿಸಿದ ಯಾವುದೇ ವಿಭಾಗಗಳಿಗೆ ನಿಯೋಜಿಸಲಾಗುವುದು.

## IX <u>ಅಭ್ಯರ್ಥಿಗಳಿಗೆ ವಿಶೇಷ ಸೂಚನೆಗಳು :</u>

**i. ಅರ್ಹ ಅಭ್ಯರ್ಥಿಗಳಿಗೆ ಮೌಖಿಕ ಪರಿಶೀಲನೆ ಮತ್ತು ಚಾಲನಾ ವೃತ್ತಿ ಪರೀಕ್ಷೆಗೆ ಹಾಜರಾಗಲು ಕರೆಪತ್ರಗಳನ್ನು ಮುದ್ರಿಸಿಕೊಳ್ಳಲು ಅನುಕೂಲವಾಗುವಂತೆ ಪ್ರಕಟಣೆಯನ್ನು ದಿನಪತ್ರಿಕೆಗಳಲ್ಲಿ ನೀಡಲಾಗುವುದು. ಅದರಂತೆ ನಿಮ್ಮ ಕರೆಪತ್ರಗಳನ್ನು ಸಂಸ್ಥೆಯ ವೆಬ್ ಸೈಟ್ www.ksrtcjobs.com ನ ಮುಖಾಂತರ ಅರ್ಜಿ ನೋಂದಣಿ ನಮೂದಿಸಿ ಮುದ್ರಿಸಿಕೊಂಡು ಸದರಿ ಕರೆ ಪತ್ರದಲ್ಲಿನ ಸೂಚನೆಗಳಂತೆ ಮೂಲ ದಾಖಲಾತಿಗಳ ಪರಿಶೀಲನೆ/ಚಾಲನಾ ವೃತ್ತಿ ಪರೀಕ್ಷೆಗೆ ಹಾಜರಾಗತಕ್ಕದ್ದು.**

**ii. ಅಭ್ಯರ್ಥಿಗಳು ನಿಗಮದ www.ksrtcjobs.com ವೆಬ್‌ಸೈಟ್‌ನಲ್ಲಿ ನೇಮಕಾತಿಗೆ ಸಂಬಂಧಿಸಿದಂತೆ ಆಗಾಗ ನೀಡುವ ಸೂಚನೆಗಳನ್ನು ಗಮನಿಸತಕ್ಕದ್ದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ 27.12.2012.**

**ನಿರ್ದೇಶಕರು (ಸಿಬ್ಬಂದಿ & ಪರಿಸರ)**

ಪ್ರತಿಯನ್ನು:

1. ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ (ಎನ್‌ಫೋರ್ಸ್‌ಮೆಂಟ್ ಸೆಲ್), 4ನೇ ಮಹಡಿ, ಬಹುಮಡಿಗಳ ಕಟ್ಟಡ, ಬೆಂಗಳೂರು ರವರ ಮಾಹಿತಿಗಾಗಿ.
2. ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ, ಕೌಶಲ್ಯ ಭವನ, ಬನ್ನೇರುಘಟ್ಟ ರಸ್ತೆ, ಡೈರಿ ವೃತ್ತ, ಬೆಂಗಳೂರು ರವರ ಮಾಹಿತಿಗಾಗಿ.
3. ವ್ಯವಸ್ಥಾಪಕ ನಿರ್ದೇಶಕರವರ ಹಿರಿಯ ಆಪ್ತ ಕಾರ್ಯದರ್ಶಿಗಳು, ಕರಾರಸಾನಿಗಮ ಕೇಂದ್ರಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
4. ನಿರ್ದೇಶಕರು(ಸಿಬ್ಬಂದಿ:ಪರಿಸರ) / ನಿರ್ದೇಶಕರು(ಭದ್ರತಾ&ಜಾಗೃತಿ) / ನಿರ್ದೇಶಕರು(ತಾಂತ್ರಿಕ) /ನಿರ್ದೇಶಕರು(ಹಣಕಾಸು)/ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ)ರವರ ಹಿರಿಯ/ಆಪ್ತ ಕಾರ್ಯದರ್ಶಿಗಳು, ಕರಾರಸಾನಿಗಮ, ಕೇಂದ್ರಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
5. ವ್ಯವಸ್ಥಾಪಕ ನಿರ್ದೇಶಕರು ಬೆಂಮಸಾನಿಗಮ/ವಾಕರಸಾನಿಗಮ/ಈಕರಸಾನಿಗಮ ರವರ ಆಪ್ತ ಕಾರ್ಯದರ್ಶಿಗಳು ರವರ ಮಾಹಿತಿಗಾಗಿ.
6. ಮುಖ್ಯ ಗಣಕ ವ್ಯವಸ್ಥಾಪಕರು, ಕರಾರಸಾನಿಗಮ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಬೆಂಮಸಾನಿಗಮ/ವಾಕರಸಾನಿಗಮ/ಈಕರಸಾನಿಗಮ ರವರ ಮಾಹಿತಿಗಾಗಿ.
8. ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾನಿಗಮ/ಬೆಂಮಸಾನಿಗಮ/ವಾಕರಸಾನಿಗಮ/ ಈಕರಸಾನಿಗಮ ರವರ ಮಾಹಿತಿಗಾಗಿ.
9. ಎಲ್ಲಾ ವಿಭಾಗ ಮುಖ್ಯಸ್ಥರು ಹಾಗೂ ಕಾರ್ಯ ವ್ಯವಸ್ಥಾಪಕರವರು, ಕರಾರಸಾನಿಗಮ/ ಬೆಂಮಸಾನಿಗಮ/ವಾಕರಸಾನಿಗಮ/ಈಕರಸಾನಿಗಮ ರವರ ಮಾಹಿತಿಗಾಗಿ ಹಾಗೂ ಈ ಜಾಹೀರಾತನ್ನು ನೌಕರರ ಮಾಹಿತಿಗಾಗಿ ಸಂಬಂಧಪಟ್ಟ ವಿಭಾಗೀಯ ಕಛೇರಿ/ಪ್ರಾದೇಶಿಕ ಕಾರ್ಯಾಗಾರ/ಘಟಕಗಳಲ್ಲಿರುವ ಸೂಚನಾ ಫಲಕಗಳಲ್ಲಿ (ನೋಟೀಸ್ ಬೋರ್ಡ್) ಪ್ರಕಟಿಸಲು ಸೂಚಿಸಲಾಗಿದೆ.

**ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು(ನೇಮಕ)**